**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ ಸಂಖ್ಯೆ:080-22343980

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-560001.
ದಿನಾಂಕ: 27.10.2017

ಸಂಖ್ಯೆ:ಕಾಶಿಇ/ಶೈವಿ/98/ಪು.ಖ/2017-18

# ಸುತ್ತೋಲೆ

**ವಿಷಯ**: ಕಾಲೇಜುಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸುವ ಬಗ್ಗೆ.

**ಉಲ್ಲೇಖ**: 1. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳು, ವಿಧಾನಸೌಧ, ಬೆಂಗಳೂರು ಇವರ ಪತ್ರ ಸಂಖ್ಯೆ: ಹೆಚ್.ಇ.ಎಂ/2471/ 2017, ದಿನಾಂಕ:01.06.2017

2. ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರು, ಬಿ.ಬಸವಲಿಂಗಪ್ಪ ಜಯಂತಿ ಆಚರಣಾ ಸಮಿತಿ(ರಿ) ಶಾಸಕರ, ಬೆಂಗಳೂರು ಇವರ ಪತ್ರ ದಿನಾಂಕ:05.05.2017.

3. ಸರ್ಕಾರದ ಪತ್ರ ಸಂಖ್ಯೆ:ಇಡಿ/143/ಯುಇಸಿ/2017. ದಿನಾಂಕ:17.10.2017

******

ದಿ!! ಬಿ. ಬಸವಲಿಂಗಪ್ಪನವರ ಜೀವನ ಸಾಧನೆ ಹಾಗೂ ಹೋರಾಟಗಳ ಕುರಿತು **"ಧೀಮಂತ"** ಎಂಬ ಸಂಸ್ಮರಣಾ ಗ್ರಂಥವನ್ನು ದಿ!! ಬಿ. ಬಸವಲಿಂಗಪ್ಪನವರ ಜಯಂತಿ ಆಚರಣಾ ಸಮಿತಿಯು ಹೊರತಂದಿದ್ದು, ಸದರಿ ಗ್ರಂಥವು ವಿದ್ಯಾರ್ಥಿಗಳಿಗೆ / ಅಧ್ಯಾಪಕರುಗಳಿಗೆ ಉಪಯುಕ್ತವಾಗುವುದರಿಂದ ಇಲಾಖೆಯ ಕಾಲೇಜುಗಳ ಗ್ರಂಥಾಲಯಗಳಿಗೆ ಖರೀದಿಸುವಂತೆ ಉಲ್ಲೇಖ-(2)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಸಂಬಂಧ, ಉಲ್ಲೇಖ-(3)ರ ಸರ್ಕಾರದ ಪತ್ರದಲ್ಲಿ **"ಧೀಮಂತ"** ಎಂಬ ಸಂಸ್ಮರಣಾ ಗ್ರಂಥವನ್ನು ಕಾಲೇಜುಗಳ ಗ್ರಂಥಾಲಯಕ್ಕೆ ಖರೀದಿಸಲು ಕಾಲೇಜುಗಳ ಪುಸ್ತಕ ಸಮಿತಿಯಲ್ಲಿ ಪರಿಶೀಲಿಸಿ, ಪುಸ್ತಕಗಳನ್ನು ಖರೀದಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಆದ್ದರಿಂದ ಸದರಿ ಪುಸ್ತಕವು ಕಾಲೇಜಿನ ವಿದ್ಯಾರ್ಥಿಗಳಿಗೆ/ಅಧ್ಯಾಪಕರುಗಳಿಗೆ ಉಪಯುಕ್ತವಾಗಿದ್ದಲ್ಲಿ ಕಾಲೇಜಿನ ಗ್ರಂಥಾಲಯ ಪುಸ್ತಕ ಸಮಿತಿಯು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಗ್ರಂಥಾಲಯ/ವಾಚನಾಲಯ ಖಾತೆಯಲ್ಲಿನ ಅನುದಾನದ ಲಭ್ಯತೆ ಮೇರೆಗೆ ನಿಯಮಾನುಸಾರ ಗ್ರಂಥಾಲಯ/ ವಾಚನಾಲಯಕ್ಕೆ ಖರೀದಿಸಲು ಅನುಮತಿ ನೀಡಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಹೆಚ್ಚಿನ ಮಾಹಿತಿಗಾಗಿ:**

**ಶ್ರೀ.ಡಿ.ಎಸ್. ವೀರಯ್ಯ ಅಧ್ಯಕ್ಷರು, ಹಾಗೂ ವಿಧಾನ ಪರಿಷತ್ ಸದಸ್ಯರು, ಬಿ.ಬಸವಲಿಂಗಪ್ಪ ಜಯಂತಿ ಆಚರಣಾ ಸಮಿತಿ(ರಿ), ನಂ.368, ಶಾಸಕರ ಭವನ, ಬೆಂಗಳೂರು-560 001.**

ಇವರಿಗೆ:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ- ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ರವಾನಿಸಲು ಸೂಚಿಸಲಾಗಿದೆ.
2. ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ)-ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳು, ಕೊಠಡಿ ಸಂಖ್ಯೆ:317ಎ ವಿಧಾನ ಸೌಧ, ಬೆಂಗಳೂರು- ಮಾಹಿತಿಗಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ,ಬೆಂಗಳೂರು-01.
3. ಮಾಹಿತಿ ಅಧಿಕಾರಿಗಳು ಮಾಹಿತಿ ತಂತ್ರಜ್ಞಾನ ವಿಭಾಗ ಕಾ.ಶಿ.ಇ ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು

3\. ಕಛೇರಿ ಪ್ರತಿ.